ಇ) ಸದರಿ ನೌಕರರು ಆತ್ಮಹತ್ಯೆ ಮಾಡಿ ಕೊಂಡಿರುವುದಿಲ್ಲ. ಬದಲಾಗಿ ಸಹಜ ಸಾವಿನಿಂದ ಮರಣ ಹೊಂದಿರುತ್ತಾರೆ.

ಈ) ಕೊರತೆಯ ಬಗ್ಗೆ ವಿಚಾರಣೆ ಪೂರ್ಣಗೊಂಡ ನಂತರ ವಿವರಗಳು ಲಭ್ಯವಾಗುವುದು.

ಮಾಗಡಿ ತಾಲ್ಲೂಕಿನಲ್ಲಿ ಪವರ್ ಸ್ಟೇಷನ್ ನಿರ್ಮಾಣ

267 (608) ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಮಾಗಡಿ ತಾಲ್ಲೂಕು ಕುದೂರು ಗುಡೇಮಾರನಹಳ್ಳಿ ಹಾಗೂ ಆಗಲಕೋಟೆ ಹ್ಯಾಂಡ್‌ಪೋಸ್ಟ್‌ಗಳಲ್ಲಿ 66 ಕೆ.ವಿ. ಪವರ್ ಸ್ಟೇಷನ್ ನಿರ್ಮಾಣ ಮಾಡುವ ಪ್ರಸ್ತಾಪ ಸರ್ಕಾರದ ಪರಿಶೀಲನೆಯಲ್ಲಿದೆಯೇ;

ಆ) ಹಾಗಿದ್ದಲ್ಲಿ, ಯಾವಾಗ ನಿರ್ಮಾಣ ಮಾಡಲಾಗುವುದು;

ಇ) ಈ ಪವರ್ ಸ್ಟೇಷನ್‌ಗಳನ್ನು ನಿರ್ಮಿಸದಿದ್ದರೆ ಈ ಭಾಗದ ರೈತರಿಗೆ, ಜನರಿಗೆ ತೀವ್ರ ವಿದ್ಯುತ್ ಸಮಸ್ಯೆ ತಲೆದೋರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಈ ಸಮಸ್ಯೆ ಪರಿಹರಿಸಲು ಸರ್ಕಾರದ ಕ್ರಮವೇನು?

ಶ್ರೀ ಶರಣಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು) :

ಅ) ಮಾಗಡಿ ತಾಲ್ಲೂಕು ಕುದೂರು ಗ್ರಾಮದಲ್ಲಿ ಒಂದು 6.30 ಎಂ. ವಿ. ಎ. ಸಾಮರ್ಥ್ಯ 66 ಕೆ.ವಿ. ವಿದ್ಯುತ್ ಕೇಂದ್ರವನ್ನು ಸ್ಥಾಪಿಸುವ ಕೆಲಸ ಮುಕ್ತಾಯ ಹಂತದಲ್ಲಿದೆ. ಇದನ್ನು ಆದಷ್ಟು ಶೀಘ್ರದಲ್ಲಿ ಚಾಲನೆಗೊಳಿಸಲಾಗುವುದು. ಆದರೆ ಗುಡೇಮಾರನ ಹಳ್ಳಿ ಹಾಗೂ ಆಗಲಕೋಟೆ ಹ್ಯಾಂಡ್‌ಪೋಸ್ಟುಗಳಲ್ಲಿ ವಿದ್ಯುತ್ ವಿತರಣಾ ಕೇಂದ್ರಗಳನ್ನು ಸ್ಥಾಪಿಸುವ ಪ್ರಸ್ತಾವನೆಗಳು ಸದ್ಯಕ್ಕೆ ಮಂಡಳಿಯ ಮುಂದಿರುವುದಿಲ್ಲ.

ಕುದೂರಿನಲ್ಲಿನ 66 ಕೆ.ವಿ. ವಿದ್ಯುತ್ ಕೇಂದ್ರವು ಚಾಲನೆಯಾದ ನಂತರ ಕುದೂರು ಗುಡೇಮಾರನ ಹಳ್ಳಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜು ಪರಿಸ್ಥಿತಿ ಉತ್ತಮಗೊಳ್ಳುವುದು. ಅಲ್ಲದೇ ಪ್ರಸ್ತುತ ಮಾಗಡಿ ಉಪ ವಿದ್ಯುತ್ ಕೇಂದ್ರದಲ್ಲಿ 106.3 ಮತ್ತು 108 ಎಂ.ವಿ. ಎ ಪರಿವರ್ತಗಳ ಸಾಮರ್ಥ್ಯವನ್ನು ತಲಾ 12.5 ಎಂ.ವಿ.ಎ ಗೆ ಹಚ್ಚಿಸುವ ಕೆಲಸವೂ ಸಹ ಪ್ರಗತಿಯಲ್ಲದ್ದು, ಇದನ್ನೂ ಸಹ ಆದಷ್ಟು ಬೇಗ ಪೂರ್ಣಗೊಳಿಸಲಾಗುತ್ತದೆ. ಇದರಿಂದಾಗಿ ಈ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜು ಸ್ಥಿತಿಯು ಮತ್ತಷ್ಟು ಉತ್ತಮಗೊಳ್ಳುತ್ತದೆ.

ಮಂಚನಬೆಲೆ ಪುನರ್ ವಸತಿ ಕಾಲೋನಿಯ ನಿವೇಶನಗಳು

268 (625) ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಬೃಹತ್ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಮಂಚನಬೆಲೆ ಜಲಾಶಯ ಪುನರ್ವಸತಿ ಕಾಲೋನಿಗಳಾದ ಚೋಳನಾಯಕನ ಹಳ್ಳಿ (ಹೊಸಪಾಳ್ಯ) ಕೋಲೂರು (ಗೋಪಾನಗರ) ಗ್ರಾಮಗಳಲ್ಲಿ ಫಲಾನುಭವಿಗಳಿಗೆ ವಿತರಿಸಲು ಇರುವ ನಿವೇಶನಗಳ ಸಂಖ್ಯೆ ಎಷ್ಟು?

ಆ) ವಿತರಿಸಲು ಬಾಕಿ ಇರುವ ನಿವೇಶನಗಳ ಸಂಖ್ಯೆ ಎಷ್ಟು?

ಇ) ಇವುಗಳನ್ನು ವಿತರಿಸಲು ಫಲಾನುಭವಿಗಳ ಪಟ್ಟಿ ತಯಾರಿಸಲಾಗಿದೆಯೇ?

ಈ) ಈ ನಿವೇಶನಗಳನ್ನು ಯಾವಾಗ ವಿತರಿಸಲಾಗುವುದು?

ಶ್ರೀ ಕೆ. ಎನ್. ನಾಗೇಗೌಡ (ಬೃಹತ್ ನೀರಾವರಿ ಮಂತ್ರಿಗಳು) :

1. ಅ) ಚೋಳನಾಯಕನಹಳ್ಳಿ (ಹೊಸಪಾಳ್ಯ), ನಿವೇಶನ ಸಂಖ್ಯೆ : 103

ಆ) ಕೋಲೂರು (ಗೋಪಾಲನಗರ), ನಿವೇಶನಗಳ ಸಂಖ್ಯೆ : 83

a) No. of sites formed distribution to beneficiaries:

i) Cholanayakanahalli (Hosapalya) :103

ii) Ko luru (Gopalanagar) : 83

2. ಅ) ಚೋಳನಾಯಕನಹಳ್ಳಿ (ಹೊಸಹಳ್ಳಿ) 49 ಸಂಖ್ಯೆ ನಿವೇಶನಗಳು

ಆ) ಕೋಲೂರು (ಗೋಪಾಲನಗರ) - ಇಲ್ಲ-

a) Cholanayakanahally (Hosapalya) 49 No. of Sites.

b) Koluru (Gopalanagara) Nil

3. ಬಾಕಿ ನಿವೇಶನಗಳ ಫಪಾನುಭವಿಗಳ ಪಟ್ಟಿಯ ತಯಾರಿಕ ಹಂತದಲ್ಲಿದೆ.

The list of beneficieries for remaining sites is under preparation.

4. ಈ ಪ್ರಶ್ನೆ ಉದ್ಭವಿಸುವುದಿಲ್ಲ.

Does not arise.

ಮಾಗಡಿ ತಾಲ್ಲೂಕಿನ ಕೆರೆಗಳ ಹೂಳೆತ್ತುವುದು

269 (623) ಶ್ರೀ ಹೆಚ್. ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಸಣ್ಣನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಮಾಗಡಿ ತಾಲ್ಲೂಕಿನಲ್ಲಿರುವ ಕೆರೆಗಳ ಸಂಖ್ಯೆ ಎಷ್ಟು; ಯಾವುವು;

ಆ) ಇವುಗಳಲ್ಲಿ ಹೂಳು ತುಂಬಿರುವ ಕೆರೆಗಳ ಸಂಖ್ಯೆ ಎಷ್ಟು; ಯಾವುವು;